


2015ರಲ್ಲಿ ಎಪ್ಪತ್ತರ ಸಂಭ್ರಮದ ಕ್ಷಣ



ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್ ಮತ್ತು ವ್ಯಾಸರಾವ್

1984ರಲ್ಲಿ ಸಿ.ಅಶ್ವತ್ಥ್ ತಮ್ಮ ಸಂಗೀತ ಸಂಯೋಜನೆಯ 'ಕೆಂಗುಲಾಬಿ' ಎಂಬ ಭಾವಗೀತೆಗಳ ಧ್ವನಿಸುರುಳಿಯ ಮೂಲಕ ಎಚ್ಚೆಸ್ವಿ, ವ್ಯಾಸ ಮತ್ತು ನನ್ನನ್ನು ಭಾವಗೀತೆಗಳ ಕವಿಗಳಾಗಿ ಪರಿಚಯಿಸಿದರು. 'ಕೆಂಗುಲಾಬಿ' ಯಶಸ್ಸು ಮತ್ತು ಜನಪ್ರೀತಿ ಗಳಿಸಿತು. ನಂತರ ನಾವು 'ತ್ರಿವಳಿ' ಕವಿಗಳ 'ಪ್ರೇಯಸಿ', 'ವಾಸಂತಿ' ಮುಂತಾದ ಹಲವು ಧ್ವನಿಸುರುಳಿಗಳು ಅಶ್ವತ್ಥ್ ಅವರ ಸಂಗೀತದಲ್ಲಿ ಹೊರಬಂದವು. ಈಗಲೂ ಕನ್ನಡದ ಸಾಮಾನ್ಯ ಜನತೆ ನಮ್ಮನ್ನು ಗುರುತಿಸುವುದು ನಮ್ಮ ಭಾವಗೀತೆಗಳಿಂದಲೇ ಎಂದರೆ ತಪ್ಪಲ್ಲ. ವ್ಯಾಸನ ಹಲವಾರು ಜನಪ್ರಿಯ ಚಿತ್ರಗೀತೆಗಳಂತೆಯೇ ಅವನ 'ನಿನ್ನ ಕಂಗಳ ಕೊಳದಿ', 'ನೀನಿಲ್ಲದೆ ನನಗೇನಿದೆ', 'ನಲ್ಲೆ, ನಿನ್ನ ಕೆನ್ನೆ ಸುತ್ತ', 'ಹೋಗು ಮನಸೇ ಹೋಗು' ಮುಂತಾದ ಭಾವಗೀತೆಗಳು ಕನ್ನಡ ಜನಮಾನಸದಲ್ಲಿ ಮೂರು ದಶಕಗಳ ನಂತರವೂ ಮಸುಕಾಗದೆ ಉಳಿದಿವೆ.

ವ್ಯಾಸ ಕುಟುಂಬ ವತ್ಸಲ. ಎಂಟು ಮಂದಿ ಸೋದರರು, ಇಬ್ಬರು ಸೋದರಿಯರ ತುಂಬು ಕುಟುಂಬ ಅವನದು. ಅವನ ಗೆಳೆಯರೆಲ್ಲರ ಮನೆಮಂದಿಯೂ ಅವನಿಗೆ ಆತ್ಮೀಯರೇ. ಚಿಂತಾಮಣಿಯಲ್ಲಿ ನಾನಿದ್ದ ಕಾಲದಲ್ಲಿ ನಮ್ಮ ಮನೆಗೆ ಅವನು ಹಲವಾರು ಬಾರಿ ಬಂದಿದ್ದ. ನನ್ನ ಕುಟುಂಬದ ಎಲ್ಲರಿಗೂ ಅವನು ಅಚ್ಚುಮೆಚ್ಚಿನ ಸೋದರನೇ ಆಗಿಬಿಟ್ಟಿದ್ದ. ಚಿಂತಾಮಣಿಯ ನಮ್ಮ 'ಗೆಳೆಯರ ಬಳಗ'ದಲ್ಲಿ ಅವನ 'ಮಳೆಯಲ್ಲಿ ನೆನೆದ ಮರಗಳು' ಎಂಬ ಕಥಾ ಸಂಕಲವನ್ನು 38 ವರ್ಷಗಳ ಹಿಂದೆ ಬಿಡುಗಡೆ ಮಾಡಿದ ಹೆಮ್ಮೆ ನಮ್ಮದು. ಎಚ್ಚೆಸ್ವಿ, ನರಹಳ್ಳಿ ಮತ್ತು ಸಿ. ಅಶ್ವತ್ಥ್ ಅದರಲ್ಲಿ ಭಾಗವಹಿಸಿದ್ದರು. ವ್ಯಾಸನ ಒಂದು ವೈಶಿಷ್ಟ್ಯವೆಂದರೆ ಅವನ ಏಕವಚನದ ಸಲಿಗೆ. ಅಶ್ವತ್ಥ್. ಶಿವಮೊಗ್ಗ ಸುಬ್ಬಣ್ಣ, ವೈ.ಕೆ.ಮುದ್ದುಕೃಷ್ಣ ಮೊದಲಾದ ಹಿರಿಕಿರಿಯರೆನ್ನದೆ ಎಲ್ಲರಿಗೂ ಅವನದ್ದು ಏಕವಚನ ಪ್ರಯೋಗವೇ. ಅಂತಹ ಗಾಢ ಆಪ್ತ ಸ್ನೇಹ ಅವನದ್ದು.

ವ್ಯಾಸನಂತಹ ಉದಾರಿ ಮತ್ತು ಧಾರಾಳಿ ಗೆಳೆಯರು ನಿಜಕ್ಕೂ ಅಪರೂಪ. ಕಷ್ಟದಲ್ಲಿರುವ ಮಂದಿಗೆ ಅವನದ್ದು ಸದಾ ತೆರೆದ ಅಭಯ, ವರದ ಹಸ್ತ. ಹೋಟೆಲಿಗೆ ಹೋದರೆ ತಾನಲ್ಲದೆ ಬೇರೆ ಯಾರಿಗೂ ಬಿಲ್ ಕೊಡಲು ಬಿಲ್‌ಕುಲ್ ಒಪ್ಪುತ್ತಿರಲಿಲ್ಲ. ಗೋಪಾಲಕೃಷ್ಣ ಅಡಿಗರು ತಮಾಷೆಯಾಗಿ ಅವನನ್ನು 'ಬಿಲ್ಲವ' ಎಂದು ಕರೆಯುತ್ತಿದ್ದರು.

ತನ್ನ ಮಗಳಾದ ಚೈತ್ರಳ ಬಗ್ಗೆ ವ್ಯಾಸನಿಗೆ ಅತೀವ ಪ್ರೀತಿ. ವಿಪರೀತ ಸಿಗರೇಟ್ ಸೇದುತ್ತಿದ್ದ ಅವನಿಗೆ, ಸುಮಾರು ಇಪ್ಪತ್ತು ವರ್ಷಗಳ ಹಿಂದೆ, ಚೈತ್ರ, 'ಅಪ್ಪಾ, ನೀನು ಸಿಗರೇಟು ಬಿಡು, ಇಲ್ಲಾ ನಾನು ಸಿಗರೇಟು ಶುರು ಮಾಡ್ತೇನೆ' ಅಂದದ್ದಕ್ಕೆ, ಅವಳ ಪ್ರೀತಿಯ ಒತ್ತಾಯಕ್ಕೆ ಸೋತು, ದೃಢ ಮನಸ್ಸಿನಿಂದ ತನಗೆ ಪರಮ ಪ್ರಿಯವಾಗಿದ್ದ ಧೂಮಪಾನಕ್ಕೆ ಶಾಶ್ವತ ವಿದಾಯ ಹೇಳಿದ್ದ!

ವ್ಯಾಸನ ವ್ಯಕ್ತಿತ್ವವನ್ನು ನಿಚ್ಚಳವಾಗಿ ತಿಳಿಯಬೇಕೆಂದರೆ ಅವನ ಬಗ್ಗೆ ಎಚ್ಚೆಸ್ವಿ ಬರೆದ ಸಾನೆಟ್ ಓದಿದರೆ ಸಾಕು. ಅದರ ಮೊದಲ ಕೆಲವು ಸಾಲುಗಳು ಹೀಗಿವೆ:

ವ್ಯಾಸನಿಗೆ ಸದಾ ಇನ್ನೊಬ್ಬರ ಸಮಯಕ್ಕೊದಗುವ  
ಹವ್ಯಾಸ. ಎಲ್ಲವೂ ಧಾರಾಳ, ಮಾತು ಪ್ರೀತಿ ಸ್ನೇಹ–  
ನಿಮಿತ್ತದ ಕಸಿವಿಸಿ ಎಲ್ಲವೂ. ಹೆರವರ ಹೊಟ್ಟೆ ಬಟ್ಟೆ  
ನೋಡುವಲ್ಲಿ ತಾಯ್ತನದುಕ್ಕು ವಾತ್ಸಲ್ಯ.  
ಸಿಡಿಮಿಡಿ ನುಡಿಯೊಳಗೆ ಸದಾ ಕಂಪಿಸುವ  
ಆದರದಾಧಾರ ಶ್ರುತಿ..

ಎಲ್ಲರ ತೊಂದರೆಗೆ ಒದಗುವ, ಆದರೆ ಯಾರಿಗೂ ತನ್ನಿಂದ ತೊಂದರೆ ಆಗಬಾರದೆನ್ನುವ ವ್ಯಾಸನ ಸ್ವಭಾವಜನ್ಯ ಗುಣ ಅವನ ಹಠಾತ್ ನಿರ್ಗಮನದಲ್ಲೂ ತೋರಿಬಂದಿರುವುದು ಅನಿರೀಕ್ಷಿತವೇನಲ್ಲ. ಇಂಥ ಅಪರೂಪದ ಆತ್ಮೀಯ ಮಿತ್ರನಿಗೆ ಅವನದೇ ಜನಪ್ರಿಯ ಭಾವಗೀತೆಯೊಂದರ ತುಸುವೇ ಬದಲಾಯಿಸಿದ ಈ ಸಾಲುಗಳೊಂದಿಗೆ ನನ್ನ ಪ್ರೀತಿಯ ನಮನ:

ನೀನೊಂದು ದಡದಲ್ಲಿ, ನಾವೊಂದು ದಡದಲ್ಲಿ  
ನಡುವೆ ಮೈಚಾಚಿರುವ ಮೌನದಹಲು.